

# ಕೆ.ಜಿ.ಎಫ್ ಕ್ಯಾಮೆರಾ ಕಣ್ಣು

■ ಪದ್ಮನಾಭ ಭಟ್

ಪ್ರಶಾಂತ್ ನೀಲ್ ನಿರ್ದೇಶನದ 'ಕೆಜಿಎಫ್' ಸಿನಿಮಾ ಈಗ ದೇಶದಾದ್ಯಂತ ಸುದ್ದಿಯಲ್ಲಿದೆ. ತೆಲುಗು, ತಮಿಳು, ಮಲಯಾಳಂ ಜತೆಗೆ ಬಾಲಿವುಡ್‌ನಲ್ಲಿಯೂ ಕೆಜಿಎಫ್ ಹವಾ ಜೋರಾಗಿಯೇ ಇದೆ. ಈ ಸಿನಿಮಾದ ದೃಶ್ಯವೈಭವದ ಹಿಂದಿನ ಕ್ಯಾಮೆರಾ ಕೌಶಲ ಭುವನ್ ಗೌಡ ಅವರದ್ದು.

'ಇದು ಟೀಂ ವರ್ಕ್. ಎಲ್ಲರೂ ಕೂತು ಚರ್ಚಿಸಿ ಹೀಗೆಯೇ ಇರಬೇಕು ಎಂದು ನಿರ್ಧರಿಸಿಕೊಂಡು ಚಿತ್ರೀಕರಿಸಿದ್ದೇವೆ. ಆರ್ಟಿಫಿಶಿಯಲ್ ಬೆಳಕನ್ನು ಹೆಚ್ಚು ಬಳಸಿಕೊಳ್ಳದೆ ಸಾಧ್ಯವಾದಷ್ಟೂ ನೈಸರ್ಗಿಕ ಬೆಳಕನ್ನೇ ಬಳಸಿಕೊಂಡು ಚಿತ್ರೀಕರಣ ಮಾಡಿರುವುದೇ ಈ ಚಿತ್ರದ ದೃಶ್ಯಗಳು ವಿಭಿನ್ನವಾಗಿ ಮೂಡಿಬರಲು ಕಾರಣ. ಪ್ರತಿಯೊಂದು ಫ್ರೇಮ್‌ನಲ್ಲಿಯೂ ನಮ್ಮ ಶ್ರಮ ಇದೆ. ಎಲ್ಲರೂ ಯಾವ ಕ್ಯಾಮೆರಾ ಇಟ್ಟು ಚಿತ್ರೀಕರಿಸುತ್ತೇವೆಯೋ ನಾವೂ ಅಂಥದೇ ಕ್ಯಾಮೆರಾ ಬಳಸಿದ್ದೇವೆ. ಆದರೆ ಟ್ರೀಟ್‌ಮೆಂಟ್‌ನಲ್ಲಿ ವ್ಯತ್ಯಾಸ ಇದೆ' ಎಂದು ಕೆಜಿಎಫ್ ದೃಶ್ಯಗಳ ಕುರಿತು ವಿವರಿಸುತ್ತಾರೆ ಭುವನ್.

ಭುವನ್ ಕೆಜಿಎಫ್ ಗಣಿಯಲ್ಲಿ ಎರಡು ವರ್ಷ ಕಳೆದಿದ್ದಾರೆ. ಆದರೆ ಯಾವುದೇ ಕ್ಷಣದಲ್ಲಿಯೂ ಅವರಿಗೆ ಬೋರ್ ಅನಿಸಿಲ್ಲವಂತೆ. 'ಈ ಸಿನಿಮಾ ನಮ್ಮೆಲ್ಲರಿಗೂ ಡ್ರೀಮ್ ಪ್ರಾಜೆಕ್ಟ್. ಹಾಗಾಗಿ ನಾವು ಎಲ್ಲಿಯೂ ತಾಳ್ಮೆ ಕಳೆದುಕೊಳ್ಳದೆ ಪ್ರತಿಯೊಂದು ಶಾಟ್ ಅನ್ನೂ ತಾಳ್ಮೆಯಿಂದ ಕಟ್ಟಿದ್ದೇವೆ. ಎರಡು ವರ್ಷ ಆಗಿರಬಹುದು. ಆದರೆ ನಾವು ಚಿತ್ರೀಕರಿಸಿದ್ದು 130 ದಿನಗಳಷ್ಟೆ. ನಮ್ಮ ನಿರ್ದೇಶಕರೂ ಎಲ್ಲಿಯೂ ಯಾವ ದೃಶ್ಯದಲ್ಲಿಯೂ ರಾಜಿ ಆಗಿಲ್ಲ. ನಾವೆಲ್ಲರೂ ಜೀವ ತೇದು ಕಟ್ಟಿರುವ ಸಿನಿಮಾ ಇದು' ಎಂದು ತುಸು ಭಾವುಕವಾಗಿಯೇ ಹೇಳಿಕೊಳ್ಳುತ್ತಾರೆ.

ಅವರು ಈ ಸಿನಿಮಾ ಒಪ್ಪಿಕೊಳ್ಳಬೇಕಾದರೆ ಕೆಜಿಎಫ್ ಕನ್ನಡದ ಸಿನಿಮಾ ಅಂತಷ್ಟೇ ಆಗಿತ್ತು. ಆದರೀಗ ಅದು ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡುತ್ತಿದೆ. ಈ ಕುರಿತೂ ಭುವನ್‌ಗೆ ತೃಪ್ತಿಯಿದೆ. 'ನಾವು ಕನ್ನಡಕ್ಕೆ, ದಕ್ಷಿಣ ಭಾರತಕ್ಕೆ ಒಂದು ಒಳ್ಳೆಯ ಸಿನಿಮಾ ಕೊಡಬೇಕು ಎಂದು ಆರಂಭಿಸಿದ್ದೆವು. ನಮ್ಮ ಪರಿಶ್ರಮ ಇಂದು ಪ್ಯಾನ್‌ಇಂಡಿಯಾ ಮಟ್ಟ ತಲುಪಿದೆ. ಎಲ್ಲರಿಗೂ ಇಷ್ಟವಾಗುತ್ತಿದೆ. ಖುಷಿಯಾಗುತ್ತದೆ. ಈ ಮಟ್ಟಕ್ಕೆ ತಲುಪುತ್ತದೆ ಎಂದು ನಿರೀಕ್ಷಿಸಿರಲಿಲ್ಲ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಭುವನ್ ಸಿನಿಮಾಟೊಗ್ರಫಿಯನ್ನು ಶಾಸ್ತ್ರೋಕ್ತವಾಗಿ ಕಲಿತವರಲ್ಲ. ಹೊಟ್ಟೆಪಾಡಿಗಾಗಿ ಏನಾದರೂ ಮಾಡಬೇಕು ಎಂದು ಅಲೆಯುತ್ತಿದ್ದಾಗ ಒಂದು ಫೋಟೊಶೂಟ್ ನೋಡಿ ಫೋಟೊಗ್ರಫಿಯಲ್ಲಿ ಆಸಕ್ತಿ ಹುಟ್ಟಿಕೊಂಡಿತು. ನಂತರ ಕೆಲವು ದಿನ ಲೈಟಿಂಗ್ ಸಹಾಯಕನಾಗಿ ಕೆಲಸ ಮಾಡಿದ್ದಷ್ಟೇ ಅವರು ಪಡೆದುಕೊಂಡ ತರಬೇತಿ. ನಂತರ ಸ್ವಂತ ಕ್ಯಾಮೆರಾ ಖರೀದಿಸಿ ಯೂಟ್ಯೂಬ್‌ನಲ್ಲಿ ನೋಡಿ ಪ್ರಯತ್ನಿಸುತ್ತಲೇ ಏಕಲವ್ಯನ ದಾರಿಯಲ್ಲಿ ಫೋಟೊಗ್ರಫಿ ಕಲಿತರು. 'ಪ್ರಶಾಂತ್ ನೀಲ್ ಅವರೇ ತನ್ನ ಗುರು' ಎಂದು ಹೇಳಿಕೊಳ್ಳುತ್ತಾರೆ ಭುವನ್. 'ಫೋಟೊ ಶೂಟ್ ಮಾಡಿಕೊಂಡಿದ್ದ ನನ್ನನ್ನು ಉಗ್ರಂ ಸಿನಿಮಾದಲ್ಲಿ ಸಿನಿಮಾಟೊಗ್ರಫಿ ಮಾಡುವಂತೆ ಹೇಳಿದರು. ಆಗಲೇ ಮೊದಲು ವಿಡಿಯೊ ಕ್ಯಾಮೆರಾ ಮುಟ್ಟಿದ್ದು ನಾನು. ಅವರ ಪ್ರೋತ್ಸಾಹ, ಮಾರ್ಗದರ್ಶನದಿಂದ ಉಗ್ರಂ ಅರ್ಧ ಸಿನಿಮಾ ನಾನೇ ಚಿತ್ರೀಕರಣ ಮಾಡಿದೆ. ನಂತರ ರಥಾವರ, ಪುಷ್ಪಕ ವಿಮಾನ ಚಿತ್ರಗಳನ್ನೂ ಚಿತ್ರೀಕರಿಸಿದೆ. ಕೆಜಿಎಫ್ ನಾನು ಪೂರ್ಣಪ್ರಮಾಣದಲ್ಲಿ ಚಿತ್ರೀಕರಣ ಮಾಡಿದ ಮೂರನೇ ಸಿನಿಮಾ' ಎಂದು ವಿವರಿಸುತ್ತಾರೆ.

'ಎಲ್ಲದಕ್ಕೂ ಕಾಲ ಕೂಡಿ ಬರಬೇಕು. ಎಲ್ಲರೂ ಕೂಡಿ ಬರಬೇಕು. ಪ್ರಶಾಂತ್ ನೀಲ್, ಯಶ್, ಹೊಂಬಾಳೆ ಫಿಲಂ ಎಲ್ಲರೂ ಕೂಡಿಯೇ ಕೆಜಿಎಫ್ ಇಷ್ಟು ದೊಡ್ಡ ಮಟ್ಟಕ್ಕೆ ಏರಿದೆ. ಒಂದೊಮ್ಮೆ ನಾನು ಎಷ್ಟು ಒಳ್ಳೆಯ ಸಿನಿಮಾಟೊಗ್ರಫಿ ಮಾಡಿದ್ದರೂ ಇಷ್ಟು ದೊಡ್ಡ ಮಟ್ಟದಲ್ಲಿ ಹೆಸರು ಮಾಡಲು ಸಾಧ್ಯವಾಗುತ್ತಿರಲಿಲ್ಲ' ಎಂದು ತಮ್ಮ ಕೆಲಸದ ಯಶಸ್ಸನ್ನು ತಂಡದ ಹೆಗಲಿಗೂ ವರ್ಗಾಯಿಸುತ್ತಾರೆ.

ಈಗಾಗಲೇ ಭುವನ್ ಬೊಗಸೆಯಲ್ಲಿ ಅವಕಾಶಗಳ ಸೋನೆಮಳೆ ಸುರಿಯಲು ಶುರುವಾಗಿದೆ. ಬಂದ ಅವಕಾಶಗಳನ್ನೆಲ್ಲ ಬಾಚಿಕೊಳ್ಳುವುದು ಅವರ ಮನಸ್ಥಿತಿ ಅಲ್ಲ. 'ಕೆಲಸ ಮಾಡಲು ಇಷ್ಟವಾಗಬೇಕು. ಹೊಸತಾನಾದರೂ ಪ್ರಯೋಗ ಮಾಡಲು ಸಾಧ್ಯವಾಗಬೇಕು. ಅಂಥ ಸಿನಿಮಾಗಳನ್ನು ಮಾತ್ರ ಒಪ್ಪಿಕೊಳ್ಳುತ್ತೇನೆ' ಎಂದು ದೃಢವಾಗಿ ಹೇಳುತ್ತಾರೆ. ■